

# ಜೆಎಸ್‌ಎಸ್ ಮಹಾವಿದ್ಯಾಪೀಠ

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು

## ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸ – 10

**ಹಾಗೂ**

## ಕೃತಿಗಳ ಲೋಕಾರ್ಪಣೆ – 7 ಮತ್ತು 9ರ ಉಪನ್ಯಾಸಗಳು

**23 ಫೆಬ್ರವರಿ 2021 * ಮಂಗಳವಾರ * ಬೆಳಗ್ಗೆ 11.00**

**ನವಜ್ಯೋತಿ ಸಭಾಂಗಣ**

**ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಮೈಸೂರು**

**ತಮಗೆ ಆತ್ಮೀಯ ಸ್ವಾಗತ**

ವಿ.ಸೂ.: ಕೋವಿಡ್–19ರ ಮಾರ್ಗಸೂಚಿಗಳನ್ನು ಅನುಸರಿಸಲು ಕೋರಿದೆ



**ಶ್ರೀ ಎಂ ರವರು** ಆಧ್ಯಾತ್ಮಿಕ ಮಾರ್ಗದರ್ಶಕರು, ಸಮಾಜ ಸುಧಾರಕರು ಮತ್ತು ಶಿಕ್ಷಣ ತಜ್ಞರು. ದಿನಾಂಕ 6.11.1949 ರಂದು ಕೇರಳದ ತಿರುವನಂತಪುರಂನಲ್ಲಿ ಜನಿಸಿದರು. ಮುಮ್ತಾಜ್ ಆಲಿ ಖಾನ್ ಅವರ ಪೂರ್ವಾಶ್ರಮದ ಹೆಸರು. 19ನೇ ವಯಸ್ಸಿನಲ್ಲಿ ಹಿಮಾಲಯ ಪರ್ವತಕ್ಕೆ ಹೋಗಿ ಅಲ್ಲಿ ಹಲವಾರು ಸಂತರು ಮತ್ತು ಋಷಿಮುನಿಗಳನ್ನು ಭೇಟಿಯಾದರು. ಮಹೇಶ್ವರನಾಥ ಬಾಬಾಜಿಯವರ ಮಾರ್ಗದರ್ಶನದಲ್ಲಿ ಆಧ್ಯಾತ್ಮಿಕ ಸಿದ್ಧಿಯನ್ನು ಪಡೆದರು. ಪ್ರಸ್ತುತ ಆಂಧ್ರಪ್ರದೇಶದ ಮದನಪಲ್ಲಿಯಲ್ಲಿ ನೆಲೆಸಿದ್ದು, ಸರಳ ಜೀವನವನ್ನು ನಡೆಸುತ್ತಿದ್ದಾರೆ. ಸತ್ಸಂಗ್ ಫೌಂಡೇಶನ್ ಮತ್ತು ಮಾನವ್ ಏಕತಾ ಮಿಷನ್ ಸಂಸ್ಥೆಗಳ ಮೂಲಕ ಬೋಧನೆ ಮತ್ತು ಮಾರ್ಗದರ್ಶನ ನೀಡುತ್ತಿದ್ದಾರೆ.

ಸತ್ಸಂಗ್ ಫೌಂಡೇಶನ್ ಎಲ್ಲ ರೀತಿಯ ಆಧ್ಯಾತ್ಮಿಕ ಚಿಂತಕರ ವಿಚಾರ ವಿನಿಮಯಕ್ಕೆ ಅವಕಾಶ ನೀಡುವ ಒಂದು ಪ್ರಬುದ್ಧ ಜ್ಞಾನಕೇಂದ್ರವಾಗಿದೆ. ಈ ಪ್ರತಿಷ್ಠಾನದ ಪ್ರಮುಖ ಚಟುವಟಿಕೆಗಳು ಮಾನವಪ್ರೀತಿ ಹಾಗೂ ಸತ್ಯಶೋಧನೆಯ ಉದ್ದೇಶಗಳಿಂದ ಕೂಡಿರುತ್ತವೆ. ಸಮಾಜಸುಧಾರಕರಾಗಿ ಮತ್ತು ಶಿಕ್ಷಣ ತಜ್ಞರಾಗಿ ಅವರ ಚಿಂತನೆಗಳು ಅನೇಕ ನೂತನ ಉಪಕ್ರಮಗಳಿಗೆ ನಾಂದಿ ಹಾಡಿವೆ. ಸತ್ಸಂಗ್ ವಿದ್ಯಾಲಯ ಆಂಧ್ರಪ್ರದೇಶದ ಬುಡಕಟ್ಟು ಜನರ ಮಕ್ಕಳಿಗೆ ಉಚಿತ, ಗುಣಮಟ್ಟದ, ಬಹುಭಾಷಾ ಶಿಕ್ಷಣವನ್ನು ಒದಗಿಸುತ್ತಿದೆ. ಸತ್ಸಂಗ್ ಗ್ರಾಮೀಣ ಶಾಲೆ ಸತ್ಸಂಗ್ ನಗರದ ಹಿಂಭಾಗದಲ್ಲಿರುವ ಮಾಕೊಂಡದ ಗುಡ್ಡಗಾಡು ಪ್ರದೇಶಗಳಲ್ಲಿ ಇದೆ. ಸತ್ಸಂಗ್ ಸ್ವಾಸ್ಥ್ಯ ಕೇಂದ್ರ ಸಮಗ್ರ ಚಿಕಿತ್ಸಾ ವಿಧಾನಗಳ ಮೂಲಕ ಜನರಿಗೆ ಕೈಗೆಟುಕುವ ಮತ್ತು ಗುಣಮಟ್ಟದ ಆರೋಗ್ಯಸೇವೆಯನ್ನು ನೀಡುತ್ತಿದೆ. ಮಾನವ್ ಏಕತಾ ಮಿಷನ್ ಧಾರ್ಮಿಕ, ಜನಾಂಗೀಯ, ಭೌಗೋಳಿಕ, ಸಾಂಸ್ಕೃತಿಕ ಮತ್ತು ಸೈದ್ಧಾಂತಿಕ ಭಿನ್ನತೆಗಳನ್ನು ಮೀರಿದ ಅಂತರಧರ್ಮೀಯ ಸಾಮರಸ್ಯವನ್ನು ಉತ್ತೇಜಿಸುವ ಕೇಂದ್ರವಾಗಿದೆ. ಸರ್ವ ಧರ್ಮ ಕೇಂದ್ರವು ಧರ್ಮಗಳ ನಡುವಣ ಅರ್ಥಪೂರ್ಣ ಸಂವಾದವನ್ನು ಸುಲಭಗೊಳಿಸಲು ಮತ್ತು ಎಲ್ಲ ಧರ್ಮಗಳ ಏಕತೆಯನ್ನು ಅರಿಯುವ ವೇದಿಕೆಯಾಗಿದೆ.

**ಶ್ರೀ ಎಂ** ರವರಿಗೆ ಆಧ್ಯಾತ್ಮಿಕ ಕ್ಷೇತ್ರದಲ್ಲಿನ ಶ್ರೇಷ್ಠ ಸೇವೆಗಾಗಿ ಭಾರತ ಸರ್ಕಾರವು 2019ರಲ್ಲಿ ರಾಷ್ಟ್ರದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳಲ್ಲೊಂದಾದ 'ಪದ್ಮಭೂಷಣ' ಪುರಸ್ಕಾರವನ್ನು ನೀಡಿ ಗೌರವಿಸಿದೆ. ಶಾಂತಿ, ಸಾಮರಸ್ಯ ಮತ್ತು ಸಹಿಷ್ಣುತೆಯ ಸಂದೇಶವನ್ನು ಹರಡುವ ಉದ್ದೇಶದಿಂದ ಅವರು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಸುಮಾರು 7,500 ಕಿ.ಮೀ. ದೂರದ ಪಾದಯಾತ್ರೆ ಮಾಡಿದ್ದಾರೆ. ಅವರ ಆತ್ಮಚರಿತ್ರೆ ಅಪ್ರೆಂಟಿಸ್ಡ್ ಟು ಎ ಹಿಮಾಲಯನ್ ಮಾಸ್ಟರ್ - ಎ ಯೋಗಿಸ್ ಆಟೋಬಯಾಗ್ರಫಿ ಅತ್ಯಂತ ಜನಪ್ರಿಯ ಕೃತಿ.

## ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ
ಸುತ್ತೂರು ಶ್ರೀಕ್ಷೇತ್ರ

## ದತ್ತಿ ಉಪನ್ಯಾಸ

**ಶ್ರೀ ಎಂ**

ಸಂಸ್ಥಾಪಕರು, ಸತ್ಸಂಗ್ ಫೌಂಡೇಶನ್
ಮದನಪಲ್ಲಿ, ಆಂಧ್ರಪ್ರದೇಶ

**ವಿಷಯ: ಸಾಧನೆ – ವಿಮೋಚನೆಯ ಹಾದಿ**

## ಅಧ್ಯಕ್ಷತೆ

**ಡಾ. ಎನ್. ಮುತ್ತುಕುಮಾರ್**

ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು
ಮೆರಿಟರ್ ಎಚ್‌ವಿಎಸ್ ಇಂಡಿಯಾ ಪ್ರೈ. ಲಿ., ಮೈಸೂರು

## ಕೃತಿಗಳ ಲೋಕಾರ್ಪಣೆ

**ಡಾ. ಎನ್.ಕೆ. ವೆಂಕಟರಮಣ**

ಸಂಸ್ಥಾಪಕ ಅಧ್ಯಕ್ಷರು ಮತ್ತು ಮುಖ್ಯ ನರಶಸ್ತ್ರ ಚಿಕಿತ್ಸಕರು
ಬ್ರೈನ್ಸ್ ನ್ಯೂರೋ ಸ್ಪೈನ್ ಆಸ್ಪತ್ರೆ, ಬೆಂಗಳೂರು




**ಸ್ಪೇಸ್ ಟೆಕ್ನಾಲಜಿ ಅಂಡ್ ಸೊಸೈಟಲ್ ಅಪ್ಲಿಕೇಷನ್ಸ್**
ಡಾ. ಎ.ಎಸ್. ಕಿರಣ್‌ಕುಮಾರ್

**ಗ್ಲೋಬಲೈಸೇಷನ್ – ಚಾಲೆಂಜಸ್ ಅಂಡ್ ದಿ ನೀಡ್ ಫಾರ್ ಕೋ–ಆಪರೇಷನ್**
ಡಾ. ಗೀತಾ ಗೋಪಿನಾಥ್




**ಪ್ರಸಾದ : ಮಧ್ಯಾಹ್ನ 1.00**



ಸುತ್ತೂರು ಶ್ರೀಕ್ಷೇತ್ರದ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠವು ಕರ್ನಾಟಕದ ಪ್ರಮುಖ ಧಾರ್ಮಿಕ ಪೀಠಗಳಲ್ಲಿ ಒಂದು. ಶ್ರೀಮಠವು ಸರ್ವಧರ್ಮ ಸಹಿಷ್ಣುತೆ ಹಾಗೂ ವಿಶ್ವಭ್ರಾತೃತ್ವಗಳನ್ನು ಎಂದಿನಿಂದಲೂ ಪಾಲಿಸಿಕೊಂಡು ಬರುತ್ತಿದೆ. ಶ್ರೀಮಠವು ಶೈಕ್ಷಣಿಕ ಪ್ರಗತಿ, ಧಾರ್ಮಿಕ ಜಾಗೃತಿ, ಸಮಾಜ ಸುಧಾರಣೆ, ಗ್ರಾಮೀಣಾಭಿವೃದ್ಧಿ, ಕಲೆ–ಸಂಸ್ಕೃತಿಗಳ ಪೋಷಣೆ ಮುಂತಾದ ಬಹುಮುಖಿ ಜನಪರ ಪ್ರಕ್ರಿಯೆಗಳಲ್ಲಿ ಹಲವಾರು ದಶಕಗಳಿಂದ ತೊಡಗಿಸಿಕೊಂಡಿದೆ. ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಸಮನ್ವಯಕ್ಕಾಗಿ ಶ್ರೀಪೀಠದ 23ನೆಯ ಪೀಠಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು 1954 ರಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠವನ್ನು ಸಂಸ್ಥಾಪಿಸಿದರು. ಇಂದು ಮಹಾವಿದ್ಯಾಪೀಠದ ಆಶ್ರಯದಲ್ಲಿ ಸುಮಾರು 300 ಕ್ಕೂ ಹೆಚ್ಚು ಧಾರ್ಮಿಕ, ಆಧ್ಯಾತ್ಮಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವವನ್ನು 2004ರಲ್ಲಿ ಆಚರಿಸಲಾಯಿತು. ಅದರ ನೆನಪಿಗಾಗಿ ದತ್ತಿಯನ್ನು ಸ್ಥಾಪಿಸಲಾಗಿದೆ. ಇದರ ಆಶ್ರಯದಲ್ಲಿ, ವಿವಿಧ ಕ್ಷೇತ್ರಗಳಲ್ಲಿ ಅಪೂರ್ವ ಸಾಧನೆ ಮಾಡಿರುವ ವ್ಯಕ್ತಿಗಳಿಂದ ಪ್ರಚಲಿತ ಸಾಮಾಜಿಕ ವಿಷಯಗಳನ್ನು ಕುರಿತಂತೆ, ಪ್ರತಿ ವರ್ಷವೂ ವಿಶೇಷ ಉಪನ್ಯಾಸ ಏರ್ಪಡಿಸಲಾಗುತ್ತಿದೆ. ಈ ಉಪನ್ಯಾಸ ಮಾಲೆಯಲ್ಲಿ ಈವರೆಗೆ ಡಾ. ನಂದನ್ ಎಂ. ನಿಲೇಕಣಿ, ಡಾ. ಸ್ಯಾಮ್ ಪಿತ್ರೋಡ, ಡಾ. ಸಿ.ಎನ್.ಆರ್. ರಾವ್ ಸದ್ಗುರು ಶ್ರೀ ಜಗ್ಗಿ ವಾಸುದೇವ್‌ಜಿ, ಡಾ. ಎ.ಪಿ.ಜೆ. ಅಬ್ದುಲ್ ಕಲಾಂ, ಡಾ. ಸುಧಾ ಮೂರ್ತಿ, ಡಾ. ಎ.ಎಸ್. ಕಿರಣ್‌ಕುಮಾರ್, ಶ್ರೀ ಎಸ್. ಗುರುಮೂರ್ತಿ ಹಾಗೂ ಡಾ. ಗೀತಾ ಗೋಪಿನಾಥ್ – ಇವರುಗಳು ಉಪನ್ಯಾಸ ನೀಡಿದ್ದಾರೆ.

